ಸಂಬಂಧಿಕರನ್ನು ಕೃತ್ಯ ನಡೆದ ಸ್ಥಳವನ್ನು ತೋರಿಸಲು ಅಮಾನವೀಯ ರೀತಿಯಲ್ಲಿ ಮಣಿಪಾಲ ಆಸ್ಪತ್ರೆಯಿಂದ ಕರೆದುಕೊಂಡು ಹೋದರು ಎಂಬುದು ಸರಿಯಲ್ಲ.

ಪೋಲೀಸರು ಅಪರಾಧಿಗಳಿಗೆ ಸಂಬಂಧಪಟ್ಟ ಒಂದು ಸ್ಕೂಟರ್ ಮತ್ತು ಒಂದು ಮೋಟರ್ ಸೈಕಲ್ಲನ್ನು ಈಗಾಗಲೇ ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದ ತನಿಖೆಯನ್ನು ಹೆಚ್ಚಿನ ಮುತವರ್ಜಿ ವಹಿಸಿ ನಿರ್ವಹಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಆದೇಶಿಸಿದೆ.

ಈ ಪ್ರಕರಣ ತನಿಖೆಯಲ್ಲಿ ಯಾವುದೇ ಲೋಪದೋಷವಾಗಿದ್ದು ಅದರ ಬಗ್ಗೆ ವಿಚಾರಣೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ಕೈಗೊಳ್ಳಲು ಅವರಿಗೆ ಸೂಚಿಸಿದೆ.

ಮಾನ್ಯ ಸದಸ್ಯರು ಸೂಚಿಸಿದ ಒಂದು ಸಂಶಯಾಸ್ಪದ ಕೊಲೆ, ಬ್ಯಾಂಕ್, ದರೋಡೆ, ಸಕ್ಕರೆ ಕಾರಖಾನೆಗಳಲ್ಲಿ ನಡೆದ ಕಳ್ಳತನದ ಪ್ರಕರಣಗಳ ಬಗ್ಗೆ ತನಿಖೆಯಲ್ಲಾಗಲೀ ಅಥವಾ ಇತರ ಪೋಲೀಸ್ ಕರ್ತವ್ಯನಿರ್ವಹಣೆಯಲ್ಲಾಗಲೀ ಯಾವದೇ ನ್ಯೂನತೆಗಳು ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿವೆಯೇ ಎಂಬುದನ್ನು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ 15 ದಿನಗಳಲ್ಲಿ ವರದಿ ಮಾಡಲು ಪಶ್ಚಿಮ ವಲಯ ಡಿ.ಐ.ಜಿ.ಯವರಿಗೆ ಆದೇಶಿಸಿದೆ.

ಮಂಡ್ಯ ನಗರದ ಮಧ್ಯೆ ಹಾದುಹೋಗುವ ಬೆಂಗಳೂರು-ಮೈಸೂರು ರಸ್ತೆಯ ಮಧ್ಯೆ ಇರುವ ಮೀಡಿಯಮ್ ಕುರಿತು

ಶ್ರೀ ಎಂ. ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದ ಮಧ್ಯೆ ಹಾದು ಹೋಗುವ ಬೆಂಗಳೂರು-ಮೈಸೂರು ರಸ್ತೆಯನ್ನು ಎರಡು ಭಾಗವಾಗಿ ಮಾಡಿ ಮೀಡಿಯಮ್ ಅನ್ನು ಹಾಕಲಾಗಿದ್ದು, ಈ ಮೀಡಿಯಮ್ ಹಾಕಿದ ನಂತರ ಜೋಡಿ ರಸ್ತೆಗಳು ಎರಡೂ ಸಹ ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿರುವುದಿಲ್ಲ. ಈ ರಸ್ತೆಗಳಲ್ಲಿ ಅಲ್ಲಲ್ಲಿ ಹಳ್ಳಗಳಾಗಿದ್ದು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದೆ, ತುಂಬಾ ತೊಂದರೆಯಾಗುತ್ತಿದೆ. ಹಾಗೂ ಜೋಡಿರಸ್ತೆಗಳಲ್ಲಿ ಬೀದಿ ದೀಪಗಳಿಲ್ಲದೆ, ವಾಹನಗಳು ಜೋಡಿ ರಸ್ತೆ ಮಧ್ಯೆ ಇರುವ ಮೀಡಿಯನ್‌ಗೆ ಡಿಕ್ಕಿ ಹೊಡೆಯುತ್ತಾ ಇದ್ದು, ದಿನಕ್ಕೊಂದು ಅಪಘಾತವು (ಆಕ್ಸಿಡೆಂಟ್) ಸರ್ವೆ ಸಾಮಾನ್ಯವಾಗಿದೆ. ಪ್ರಯಾಣಿಕರು ತುಂಬಾ ಭಯಗ್ರಸ್ಥರಾಗಿದ್ದಾರೆ. ಈ ಜೋಡಿರಸ್ತೆ ನಿರ್ಮಾಣ ಕಾಮಗಾರಿ ಪೂರ್ಣವಾಗಿರುವುದಿಲ್ಲ. ಈ ಜೋಡಿ ದುರಸ್ತಿಗಳನ್ನು ದುರಸ್ತಿ ಮಾಡುವ ಕಾರ್ಯವನ್ನು, ಹಾಗೂ ಜೋಡಿ ರಸ್ತೆಯಲ್ಲಿ ಆಗುವ ಅಪಘಾತವನ್ನು ತಪ್ಪಿಸಲು ಪರಿಹಾರೋಪಾಯಗಳನ್ನು ಕೈಗೊಳ್ಳಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಪಡಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೇ,

ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯು ಮಂಡ್ಯ ನಗರ ಪ್ರದೇಶ ವ್ಯಾಪ್ತಿಯಲ್ಲಿ ಸುಮಾರು 4 ಕಿ.ಮೀ.ನಷ್ಟು ಹಾದು ಹೋಗುತ್ತದೆ. ಈ ಭಾಗವು, ಅತ್ಯಂತ ಜನನಿಬಿಡ ಹಾಗೂ ವಾಹನ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ,

ಈ ಭಾಗದ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾರ್ಪಡಿಸುವ ಕಾಮಗಾರಿಯನ್ನು 45 ಲಕ್ಷ ರೂ. ಗಳ ಅಂದಾಜಿನಲ್ಲಿ ಡಿಸೆಂಬರ್ 1986ರಲ್ಲಿ ತೆಗೆದುಕೊಳ್ಳಲಾಯಿತು.

ಈ ಕಾಮಗಾರಿಯಲ್ಲಿ ಮಂಡ್ಯ ನಗರದಲ್ಲಿ 4 ಕಿ.ಮೀ. ರಸ್ತೆಯನ್ನು ಮಧ್ಯದಲ್ಲಿ ಒಂದು ಮೀಟರ್ ಅಗಲದ ವಿಭಾಜಕವನ್ನು (Median) ಮಾಡಿ, ಎರಡು ಬದಿಯ ರಸ್ತೆಗಳನ್ನು ಅಗಲಪಡಿಸಿ, ಒಟ್ಟು ನಾಲ್ಕು ಪಥದ ಸಂಚಾರಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆ ಮಾಡಲಾಗಿದೆ. ಬಹುತೇಕ ಕಾಮಗಾರಿಯು ಮುಗಿದಿದ್ದು ಈಗಾಗಲೇ 51 ಲಕ್ಷ ರೂ.ಗಳ ವೆಚ್ಚವಾಗಿದೆ. ಇತ್ತೀಚಿನ ಮಳೆಗಾಲದಲ್ಲಿ, ಹಾಗೂ ಕುಡಿಯುವ ನೀರಿನ ಸರಬರಾಜು ಕೊಳವೆಗಳು ಅಲ್ಲಲ್ಲಿ ಹಾನಿಗೊಳಗಾಗಿ ಸೋರು ನೀರಿನಿಂದ ರಸ್ತೆಯಲ್ಲಿ ಗುಂಡಿಗಳಾಗಿದ್ದು ಈಗ ದುರಸ್ಥಿ ಪಡಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಈ ಭಾಗದ ರಸ್ತೆಗೆ ಪೂರ್ಣವಾಗಿ ಡಾಂಬರು ಹಾಕುವ ಮುಂಚೆ ನೀರು ಸರಬರಾಜು ಕೊಳವೆಗಳನ್ನು ಸ್ಥಳಾಂತರಿಸಬೇಕಿದ್ದು ಸಂಬಂಧಪಟ್ಟವರೊಡನೆ ಶೀಘ್ರ ಕ್ರಮಕ್ಕಾಗಿ ಒತ್ತಾಯಿಸಲಾಗುತ್ತಿದೆ.

ಅಪಘಾತಗಳನ್ನು ತಡೆಯುವ ಸಲುವಾಗಿ ಸೂಕ್ತ ಎಚ್ಚರಿಕೆ ಫಲಕಗಳು, ಪ್ರತಿಫಲನ ಬಣ್ಣದಿಂದ ಗುರುತುಗಳನ್ನು (Reflectors) ಹಾಕಲಾಗಿದೆ. ಮಂಡ್ಯ ನಗರಪೋಲೀಸ್ ಇಲಾಖೆಯ ವರದಿ ಪ್ರಕಾರ, ರಸ್ತೆಯಲ್ಲಿ ವಿಭಾಜಕವನ್ನು ಹಾಕಿ ಜೋಡಿ ರಸ್ತೆ ಮಾಡಿದ ಬಳಿಕ ಅಪಘಾತಗಳು ಕಮ್ಮಿಯಾಗಿದೆ ಎಂದು ತಿಳಿದು ಬಂದಿದೆ. ಇದು ಸಂತೋಷದ ವಿಷಯ ಮತ್ತು ಕೆಲಸ ಫಲದಾಯಕ.

ನಗರ ಪ್ರದೇಶದಲ್ಲಿ ರಸ್ತೆ ದೀಪಗಳನ್ನು ಒದಗಿಸುವ ಹಾಗೂ ನಿರ್ವಹಿಸುವ ವಿಚಾರವು ಮಂಡ್ಯ ನಗರ ಸಭೆಯ ವ್ಯಾಪ್ತಿಗೆ ಬರುವುದರಿಂದ, ಲೋಕೋಪಯೋಗಿ ಇಲಾಖೆಯ ವತಿಯಿಂದ ರಸ್ತೆ ದೀಪಗಳನ್ನು ಅಳವಡಿಸುವ ವಿಷಯವು ಪ್ರಸ್ತಾಪದಲ್ಲಿ ಇರುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಸಮಪದಗಳೆಂದು ಪರಿಗಣಿಸುವ ಸಮಿತಿಯ ಕಾರ್ಯವೈಖರಿ.

ಡಾ. ಆರ್.ಬಿ. ಚೌಧುರಿ : ಮಾನ್ಯ ಉಪಾಧ್ಯಕ್ಷಣೆಯವರೇ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಳ ಸಮಪದಗಳೆಂದು ಪರಿಗಣಿಸುವ ಸಮಿತಿಯನ್ನು ರಚಿಸಿ ಎರಡು ವರ್ಷಗಳಾದರೂ ಈ ಸಮಿತಿಯು ಇನ್ನೂವರೆವಿಗೂ ಕಾರ್ಯವನ್ನು ಮುಗಿಸಿಲ್ಲ, ಹಾಗೂ ಸುಮಾರು 1 ವರ್ಷದಿಂದ ಸಮಿತಿ ಸಭೆಗಳನ್ನೇ ನಡೆಸಿಲ್ಲ, ಇದಲ್ಲದೆ ಮೂರು ಉಪಸಮಿತಿಗಳನ್ನು ಮಲೇರು-ಮಾಲೇರು,ಜಾತಿಗಳ ಬಗ್ಗೆ ಒಂದು ಸಮಿತಿ, ಜೇನು ಕುರುಬ, ಕಾಡು ಕುರುಬ, ಜಾತಿಗಳ ಬಗ್ಗೆ ಒಂದು ಸಮಿತಿ, ಹಾಗೂ ಇತರೇ ಜಾತಿಗಳ ಬಗ್ಗೆ ಒಂದು ಸಮಿತಿ-ಹೀಗೆ ಮೂರು ಉಪಸಮತಿಗಳನ್ನು ರಚಿಸಿ ದಿನಾಂಕ 28 -2-91ರೊಳಗೆ ಮುಖ್ಯ ಸಮಿತಿಗೆ ವರದಿ ಸಲ್ಲಿಸಬೇಕೆಂದು ತೀರ್ಮಾನಿಸಲಾಗಿದ್ದು, ಈ ಮೂರು ಉಪಸಮಿತಿಗಳು ತಮ್ಮ ವರದಿಗಳನ್ನು ಸಲ್ಲಿಸಿದ ಯಾವುದೇ ಮಾಹಿತಿ ಇಲ್ಲ. ಹಾಗೂ ಮುಖ್ಯ ಸಮಿತಿ ಕೂಡ 1991ನೇ ಮೇ ತಿಂಗಳಲ್ಲೇ ಈ ಕಾರ್ಯವನ್ನು ಪೂರ್ತಿಗೊಳಿಸುವುದೆಂದು ತೀರ್ಮಾನಿಸಲಾಗಿತ್ತು. ಆದರೆ ಈವರೆಗೂ ಈ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಆದ್ದರಿಂದ ಸರಕಾರ ಈ ಸಮಿತಿಯ ಸಭೆಯನ್ನು ಕರೆಯಲಾಗಿಲ್ಲ. ಆದ್ದರಿಂದ